ಇಲ್ಲ. ಈ ಬಗ್ಗೆ ಅವರು ಒಂದು ಅರ್ಜಿಯನ್ನೂ ಸಹ ಕಳುಹಿಸಿಕೊಟ್ಟಿದ್ದಾರೆ. ಆ ಅರ್ಜಿ ಎಲ್ಲಿದೆಯೋ ಗೊತ್ತಿಲ್ಲ, ಆದುದರಿಂದ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದು ಏನೆಂದರೆ ಬ[illegible] ಹುಕುಂನಲ್ಲಿ ವಕ್ಕಲೆಬ್ಬಿಸಿರತಕ್ಕಂಥಾವರ ರೈತರ ಬಗ್ಗೆ ಏನಾದರೂ ಒಂದು ಬೇರೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೆ ನಾನಾಗಲೇ ಉತ್ತರ ಕೊಟ್ಟಿದ್ದೇನೆ. ಇನ್ನೊಂದು ಸಾರಿ ಹೇಳಬೇಕು ಎಂದರೆ, ಯಾವ ಒಂದು ಪ್ರದೇಶದಲ್ಲಿ ಜನರು ಬ[illegible]ವರಿಗೆ ಇದ್ದಾರೆ, ಅವರ ಹೆಸರಿನಲ್ಲಿ ಪಹಣಿ ಬರೆಯಲಿಲ್ಲ ಎಂದರೆ ನಾನು ಇದರ ಬಗ್ಗೆ ಸಮಗ್ರವಾಗಿ ಪರಿಶೀಲನೆ ಮಾಡಿಸಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡುತ್ತೇನೆ, ಇನ್ನು ಎರಡು ತಿಂಗಳೊಳಗೆ ಈ ಕೆಲಸ ಮಾಡಿಸುತ್ತೇನೆ.

C. R. E. Cell

95. SRI S. S. ARAKERI (Balloli).—Will the Minister for Law. Social Weifare and Backward Classes be pleased to state.–

(*a*) when the C.R.E. Cell started;,

(*b*) whether the entire expenditure on this cell is being met by the Central Government;

(*c*) if so. the amount allotted from the Central Government and the amount spent so for;

(*d*) the total number of officials and of them the number of SC. ST. officials;

(*e*) the number of cases in which punishment has been awarded (figures yearwise for the last three years)?

SRI L. G. HAVANUR (Minister for Law. Social Welfare and Backward Classes).–

(*a*) The C. R. E. Cell started functioning since last week of October 1974.

(*b*) Yes.

(*c*) Amount released by the Government of India Rs. 10,[illegible]2,100.00	...	Amount spent by the State Government Rs. 9,83,883,96
(*d*) Total strength of the Cell (both Ministerial and Executive)	...	33
SC Officials	...	4
ST Officials	...	1

(*e*) Statement enclosed.—

STATEMENT

Showing the number of cases registered under Protection of Civil rights Act during the years 1975, 1976, 1977 and 1978 (upto) end of March 1978).

Sl. No.	Year	No. of cases reported	No. of cases chargesheeted	No. of cases convicted	No. of cases acquitted	No. of cases compounded	No. of cases pending trial	No. of cases under investigation	No. of cases otherwise disposed of	Remarks
1	2	3	4	5	6	7	8	9	0	11
1	1975	469	397	457	94	45	98	...	75	*Upto March 1978
2	1976	592	549	205	77	61	205	...	43	
3	1977	329	243	35	9	5	194	60	26	
4	1978*	66	7	...	...	...	7	59	...	

ಶ್ರೀ ಎಸ್.ಎಸ್.—ಆರಕೇರಿಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್ ಕಳೆದ ಮೂರು ವರ್ಷಗಳ ಹಿಂದೆ ಸ್ಥಾಪನೆಯಾಗಿದೆ ಎಂದು ತಾವು ಹೇಳಿದ್ದೀರಿ, ಮತ್ತು ಇದಕ್ಕೆ ಕೇಂದ್ರ ಸರ್ಕಾರದವರು ಸುಮಾರು ೧೦ ಲಕ್ಷ ರೂಪಾಯಿಗಳನ್ನು ಮುಂಜೂರು ಮಾಡಿದ್ದು ಅದರಲ್ಲಿ ಕೇವಲ ೯ ಸಾವಿರ ರೂಪಾಯಿಗಳಷ್ಟು ಖರ್ಚಾಗಿದೆ ಎಂದು ಹೇಳಿದ್ದೀರಿ. ಕರ್ನಾಟಕದ ನಾನಾ ಭಾಗಗಳಲ್ಲಿ ಆದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನ ಗಿರಿಜನರ ಮೇಲೆ ದೌರ್ಜನ್ಯಗಳು ನಡೆಯುತ್ತಿದ್ದು ಅವರ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಬಂದಿದೆ ಎಂದು ನನಗನ್ನಿಸುತ್ತದೆ. ಇಂಥ ಸಮಯದಲ್ಲಿ ಅವರ ಹಕ್ಕುಗಳನ್ನು ಕಾಪಾಡುವಲ್ಲಿ ಈ ಸೆಲ್ ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ, ಇದು ವ್ಯಫಲ್ಯವಾಗಿರತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

†ಶ್ರೀ ವಿಲ್. ಜಿ. ಹಾವನೂರ್.—ಸರ್ಕಾರದವರ ಕಾರ್ಯಕ್ರಮದಲ್ಲಿ ಸಾಕಷ್ಟು ಆಸ್ಥೆ ವಹಿಸಿ ಅಸ್ಪೃಶ್ಯರ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರದವರು ಇದಕ್ಕೆ ಸುಮಾರು ೧೦ ಲಕ್ಷ ರೂಪಾಯಿಗಳನ್ನು ಮುಂಜೂರು ಮಾಡಿದ್ದರೂ ಕೂಡ ಇದಕ್ಕೆ ಮುಂಚೆಯೇ ಸುಮಾರು ನಾಲ್ಕು ವರ್ಷಗಳ ಕಾಲ ರಾಜ್ಯ ಸರ್ಕಾರದವರು ೨ ಲಕ್ಷ ರೂಪಾಯಿಗಳಿಗೂ ಮೇಲೆ ಹಣ ವನ್ನು ಖರ್ಚು ಮಾಡಿದೆ. ಆದರೆ ಈ ಪ್ರಶ್ನೆಗೆ ಉತ್ತರ ಕಳುಹಿಸಿದ ನಂತರ ಕೇಂದ್ರ ಸರ್ಕಾರದಿಂದ ನಮಗೆ ಒಟ್ಟು ೧೦ ಲಕ್ಷ ರೂಪಾಯಿಗಳ ಹಣ ಮಾಹಿತಿ ಬಂತು. ಬಂದ ಹಣವನ್ನು ನಾವು ಖರ್ಚು ಮಾಡದೇ ಉಳಿಸಿಲ್ಲ, ಅವರು ಹಣ ಕೊಡುವಾಗ ಒಂದು ಲಕ್ಷ ಎರಡು ಲಕ್ಷ ೫೦ ಸಾವಿರ ರೂಪಾಯಿಗಳು ಹೀಗೆ ಕೊಟ್ಟಿದ್ದಾರೆ. ಇದರಿಂದಾಗಿ ನಮಗೆ ಈಗ ಇದರಲ್ಲಿ ಸುಮಾರು ೩೦ ಸಾವಿರ ರೂಪಾಯಿಗಳು ಉಳಿದಿದೆ ಎಂದು ತೋರಿಸಿದ್ದೇವೆ. ಇದು ನಾವು ಖರ್ಚು ಮಾಡದೆಬಿಟ್ಟಿದ್ದಲ್ಲ.

ಶ್ರೀ ಎಸ್.ಎಸ್. ಅರಕೇರಿ.—ನನ್ನ ಈ ಪ್ರಶ್ನೆಗೆ ಉತ್ತರವಾಗಿ ಈ ಸಂಸ್ಥೆಯಲ್ಲಿ ಸುಮಾರು ೩೩ ಜನ ಗುಮಾಸ್ತರು ಇದ್ದಾರೆ, ಎಂದು ತಿಳಿಸಿದ್ದೀರಿ. ಈ ಒಂದು ಸಿಬ್ಬಂದಿ ಇಡೀ ೨೦ ಜಿಲ್ಲೆಗಳಲ್ಲಿ ಹರಿಜನರ ಮೇಲೆ ಏನೇನು ದೌರ್ಜನ್ಯ ನಡೆಯುತ್ತದೆ ಎಂದು ತಿಳಿದುಕೊಂಡು ರಕ್ಷಣೆ ಕೊಡಲಿಕ್ಕೆ ಸಾಧ್ಯವೇ? ಇದರ ಸಿಬ್ಬಂದಿಯನ್ನು ಹೆಚ್ಚಿಸಿ, ಒಂದೊಂದು ಜಿಲ್ಲೆಯಲ್ಲಿಯೂ ಒಂದೊಂದು ಫೈಯಿಂಗ್ ಸ್ಕ್ವಾಡ್ ಮಾಡುವುದಕ್ಕೆ ಪ್ರಯತ್ನ ಮಾಡಿ, ಹರಿಜನರ ಹಕ್ಕುಭಾದ್ಯತೆಗಳಿಗೆ ರಕ್ಷಣೆ ಕೊಡುವುದಕ್ಕೆ ಆಶ್ವಾಸನೆ ಕೊಡುತ್ತೀರಾ? ಸರ್ಕಾರದವರು ಈ ವಿಷಯದಲ್ಲಿ ಸಹಾನುಭೂತಿಯಿಂದ ವಿಚಾರ ಮಾಡುತ್ತೀರಾ?

ಶ್ರೀ ಎಲ್.ಜಿ. ಹಾವನೂರ್.—ಹರಿಜನರ ಮೇಲೆ ಆಗತಕ್ಕ ಅತ್ಯಾಚಾರ ಅನ್ಯಾಯಗಳ ಬಗ್ಗೆ ಹೇಳಬೇಕು ಎಂದರೆ, ಕೇವಲ ಸರ್ಕಾರದವರು ಇಂಥ ಅನೇಕ ಸೆಲ್‌ಗಳನ್ನು ನೇಮಿಸಿದರೂ ಕೂಡ ಇವರಿಗೆ ಆಗತಕ್ಕ ಅನ್ಯಾಯಗಳನ್ನು ತಡೆಗಟ್ಟಲಿಕ್ಕೆ ಸಾಧ್ಯವಿಲ್ಲ. ನಮ್ಮ ಸಮಾಜದ, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆ, ಜಾತಿ ಪದ್ಧತಿಯ ಅನಿಷ್ಟ, ಈ ಅನಿಷ್ಟದ ಅತಿರೇಕದಿಂದ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಿರುವುದು ಕೇವಲ ಸರ್ಕಾರದಿಂದ ಮಾತ್ರವಲ್ಲ ಜನತೆಯಲ್ಲಿಯೂ ಕೂಡ ಇವರ ಬಗ್ಗೆ ಪುನೋಭಾವ ಬದಲಾವಣೆಯಾಗಿ ಸರ್ಕಾರದ ಕಾರ್ಯಕ್ರಮಗಳಲ್ಲಿ ಅವರು ಒಪ್ಪಿಗೆಯನ್ನು ವ್ಯಕ್ತ ಮಾಡಿ ಸಹಕಾರ ನೀಡಿದರೆ ಮಾತ್ರ ಇದು ಯಶಸ್ವಿಯಾಗಬಹುದೆಂದು ನಾನು ತಿಳಿಸಿದ್ದೇನೆ. ಆದರೆ ನಾನು ಸದಸ್ಯರು ಸರ್ಕಾರದವರ ಮೇಲೆ ಸಂಪೂರ್ಣವಾದ ಭಾರವನ್ನು ಹಾಕಿ, ಸರ್ಕಾರ ತನ್ನ ಕರ್ತವ್ಯದಲ್ಲಿ ಚ್ಯುತಿಗೊಂಡಿದೆ ಎಂದು ಹೇಳಿದರೆ ಅದು ಸರಿಯಲ್ಲ. ಮಾನ್ಯ ಸದಸ್ಯರೂ ಕೂಡ ಸಾಮಾಜಿಕ ಶಾಸ್ತ್ರಜ್ಞರು, ಮತ್ತು ಅನೇಕ ಪುಸ್ತಕಗಳನ್ನು ಬರೆದಿರತಕ್ಕವರು, ಮತ್ತು ಡಾಕ್ಟರ್ ಅಂಬೇಡ್ಕರ್ ಅವರ ಶಿಷ್ಯಂದಿರೂ ಹೌದು. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಇಂಥ ಆಗಾಧವಾದ ಅನಿಷ್ಟ ಪದ್ಧತಿಯನ್ನು ನಿವಾರಣೆ ಮಾಡುವುದಕ್ಕೆ ಯಾವ ಸರ್ಕಾರದಿಂದಲೂ ತಕ್ಷಣ ಸಾಧ್ಯವಿಲ್ಲ. ನಾವು ಹಿಂದಿನಿಂದಲೂ ನಡೆದುಕೊಂಡು ಬಂದ ಸಂಪ್ರದಾಯಗಳು ಮತ್ತು ಕೆಲವು ಮೂಢ ನಂಬಿಕೆಗಳನ್ನು ಸೆಲ್‌ನಿಂದಲೇ ನಿವಾರಣೆ ಮಾಡುತ್ತೇವೆಂದು ಹೇಳುವುದು ಸಾಧ್ಯವಿಲ್ಲ. ಇದಕ್ಕೆ ಎಲ್ಲರೂ ಪ್ರಯತ್ನ ಮಾಡಬೇಕು. ಮತ್ತು ಪ್ರಚಾರವನ್ನೂ ಮಾಡಬೇಕು. ಸೆಲ್ ಮಾಡಿರುವುದು, ಕೇವಲ ಹರಿಜನರಿಗೆ ಆಗತಕ್ಕ ಅನ್ಯಾಯಗಳಲ್ಲಿ ಸ್ವಲ್ಪ ಮಾತ್ರ ತಡೆಗಟ್ಟಲಿಕ್ಕೆ ಶಕ್ಯವಾಗುತ್ತದೆ ಎಂದು ನಾವು ತಿಳಿದುಕೊಂಡಿದ್ದೇವೆಯೇ ವಿನಹ ಸಂಪೂರ್ಣವಾಗಿ ಸಮರ್ಥನೀಯರಿಂದ ಆಗತಕ್ಕ ಶೋಷಣೆಯನ್ನು ತಪ್ಪಿಸುತ್ತೇವೆಂದು ಅಲ್ಲ. ಎಲ್ಲೆಲ್ಲಿ ಹರಿಜನ ಬಗ್ಗೆ ಸಾಕಷ್ಟು ರಕ್ಷಣೆ ಸಿಕ್ಕಲಿಲ್ಲ ಎಂದು ಸರ್ಕಾರಕ್ಕೆ ದೂರು ಬರುತ್ತದೆ ಅಂಥ ದೂರುಗಳು ಬಂದಾಗ ಮಾತ್ರ ಸರ್ಕಾರದವರು ಯೋಗ್ಯ ತಪಾಸಣೆ ನಡೆಸಿ ಕಾನೂನು ರೀತ್ಯ ಕೇಸುಗಳನ್ನು ಹಾಕಿ ಶಿಕ್ಷೆ ವಿಧಿಸಲಿಕ್ಕೆ ವಕೀಲರ ಸಹಾಯವನ್ನೂ ಕೊಡುವ ಒಂದು ಹೊಸ ಪದ್ಧತಿಯನ್ನು ಸರ್ಕಾರ ಹಾಕಿಕೊಂಡಿದೆ. ೧೯೭೪ರಲ್ಲಿ ಕೇಂದ್ರ ಸರ್ಕಾರದಿಂದ, ಈ ಸೆಲ್ಲನ್ನು ರಾಜ್ಯ ಸರ್ಕಾರದವರು ತೆಗೆದರೆ ಅದರ ಪೂರ್ತಿ ಹಣವನ್ನು ನಾವು ಕೊಡುತ್ತೇವೆಂದು ಹೇಳಿದ್ದರು. ಆದರೆ ಅವರು ಹೇಳುವ ರೀತಿಯಲ್ಲಿ ಇಲ್ಲಿಯವರೆಗೂ ನಮಗೆ ಹಣ ಕೊಡಲಿಲ್ಲ. ಆದರೂ ಕೂಡ ರಾಜ್ಯ ಸರ್ಕಾರದ ಬೊಕ್ಕಸದಿಂದ ಸುಮಾರು ೯ ಲಕ್ಷ ರೂಪಾಯಿಗಳ ಹಣವನ್ನು ನಾವು ಖರ್ಚು ಮಾಡಿದ್ದೇವೆ. ಅವರು ಈ ೧೦ ಲಕ್ಷ ರೂಪಾಯಿಗಳನ್ನು ಕೆಲವೊಂದು ಸಾರಿ ಕೊಟ್ಟಿದ್ದಾರೆ. ಇದನ್ನು ೧೦–೧೫ ಕಂತಿನಲ್ಲಿ ಕೊಟ್ಟಿದ್ದು ಉಂಟು. ಒಂದೇ ಒಂದು ಸೆಲ್‌ನಿಂದ, ಕೇವಲ ೩೩ ಜನ ಅಧಿಕಾರಿಗಳಿಂದ ಈ ಬೃಹದಾಕಾರವಾದ ಸಮಸ್ಯೆ ಬಗೆಹರಿಯುವುದಕ್ಕೆ ಸಾಧ್ಯವಿಲ್ಲ. ಆದರೂ ಕೂಡ ಈ ಸಮಸ್ಯೆಯನ್ನು ಯಾವ ರೀತಿಯಲ್ಲಿ ಬಗೆಹರಿಸಬೇಕು, ಎನ್ನುವುದಕ್ಕೆ ಸರ್ಕಾರ, ಎಲ್ಲರ ಸಹಕಾರ ಮತ್ತು ಅಭಿಪ್ರಾಯವನ್ನು ಸಂಗ್ರಹಣೆ ಮಾಡಿ ಈ ಸಮಸ್ಯೆಯ ವ್ಯಾಪ್ತಿಯನ್ನು ತಿಳಿದುಕೊಂಡು ಮೊನ್ನೆ ತಾನೇ, ಇದಕ್ಕೆ ಇನ್ನೂ ನಾಲ್ಕು ಸೆಲ್‌ಗಳನ್ನು ಡಿವಿಷನಲ್ ಲೆವೆಲ್‌ನಲ್ಲಿ ತೆಗೆಯಬೇಕೆಂದು ಮಾಡಿದ್ದೇವೆ. ಇದರ ಸಿಬ್ಬಂದಿಯನ್ನು ಹೆಚ್ಚಿಸಬೇಕೆಂದು ಮತ್ತು ಹೆಚ್ಚಿನ ಅಧಿಕಾರವನ್ನು ಅಧಿಕಾರಿಗಳಿಗೇ ಕೊಟ್ಟು ಕೆಲಸ ಮಾಡಿಸಬೇಕು ಎಂದು ನಮ್ಮ ಖಾತೆಯ ಮಟ್ಟದಲ್ಲಿ ಒಂದು ನಿರ್ಣಯ ತೆಗೆದುಕೊಂಡಿದ್ದೇವೆ ಬಹುಶಃ ಇನ್ನೊಂದು ೮—೧೦ ದಿವಸದಲ್ಲಿ ಇದರ ಬಗ್ಗೆ ಸರ್ಕಾರದ ಆಜ್ಞೆಯೂ ಕೂಡ ಬರಬಹುದು ಎಂದು ನಾನು ನಿರೀಕ್ಷಣೆ ಮಾಡುತ್ತಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—೧೯೭೪ ರಿಂದ ಇಲ್ಲಿಯವರೆಗೆ ೯ ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡಲಾಗಿದೆ ಎಂದು ಹೇಳಿದಿರಿ. ಈ ಬಗ್ಗೆ ಎಷ್ಟು ಕೇಸುಗಳನ್ನು ಹಾಕಿದ್ದೀರಿ, ಎಷ್ಟು ಕೇಸುಗಳು ಕನ್‌ವಿಕ್ಷನ್ ಆಗಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಎಲ್.ಜಿ. ಹಾವನೂರ್.—ಪರಿಶಿಷ್ಟದಲ್ಲಿ ಈ ಎಲ್ಲ ವಿವರಗಳನ್ನು ಕೊಡಲಾಗಿದೆ.

ಶ್ರೀ ಯು.ಬಿ. ಬೊರ್ಕರ್.—ಸಿರ್ಸಿ ಕ್ಷೇತ್ರದಲ್ಲಿ ಕೆಲವು ಪರಿಜನರು ಸರ್ಕಾರೀ ಜಮೀನನ್ನು ಅತಿ ಕ್ರಮಣ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದರು. ಆದರೆ ಜಿಲ್ಲಾಕಾಂಗ್ರೆಸ್ಸಿನ ಪರಿಜನ ಮತ್ತು ಗಿರಿಜನ ಸಮಿತಿಯು ಕನವಿ:ನರ ಆದವರು ಈ ಜಮೀನನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡು ೬ ಪರಿಜನ ಮತ್ತು ಗಿರಿಜನ ಕುಟುಂಬದವನ್ನು ಇಂದು ನಿರ್ಗತಿಕರನಾ ಗಿ ಮಾಡಿದ್ದಾರೆ.

ಅಧ್ಯಕ್ಷರು.—ತಾವು ನೇರವಾಗಿ ಪ್ರಶ್ನೆ ಕೇಳಿ ?

ಶ್ರೀ ಯು.ಬಿ. ಬೊರ್ಕರ್,—ಮುಂದಗೋಡನಲ್ಲಿಯೂ ಸಹ ಇದೇ ರೀತಿ ನಡೆದಿದೆ. ಈ ಎರಡೂ ಘಟನೆಗಳ ಬಗ್ಗೆ ಪೌರರ ಹಕ್ಕು ಬಾಧ್ಯತೆಗಳ ಸಿಬ್ಬಂದಿ ಶಾಖೆಯವರು ಏನು ಕ್ರಮ ತೆಗೆದುಕೊಂಡಿದ್ದಾರೆ ?

ಅಧ್ಯಕ್ಷರು.—ಇದು ಮೂಪ ರೀತಿ ಉಪ-ಪ್ರಶ್ನೆಯಾಗುತ್ತದೆಂಬುದನ್ನು ಮಾನ್ಯ ಬೊಮ್ಮಾಯಿ ಅವರೇ ಹೇಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಉಪ ಪ್ರಶ್ನೆ ಕೇಳುವವರು ಪ್ರಶ್ನೆಗೆ ಸಂಬಂಧಪಟ್ಟಂತೆ ಕೇಳ ಬೇಕೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಉತ್ತರವೂ ಸಹ ಅದೇ ರೀತಿ ಇರಬೇಕು. ಉತ್ತರ ಭಾಷಣವಾದರೆ ಕಷ್ಟವಾಗುತ್ತದೆ.

SRI AZEEZ SAIT.—Sometime ago our friend Sri Bommai and Sri Devegowda had said that the new members should be trained in the parliamentary procedure. We agreed with them Similarly we have too have got new members. It is the responsibility of the Leaders of the Parties to train them and control them. Equally so there are new Ministers who are required to be trained.

SRI S.R. BOMMAI.—I shall train my friends.

SRI L. G. HAVANUR.—Even though I am new to this House, I have not been irrelevant while answering questions.

ಶ್ರೀ ಗೋವಿಂದ ಪಿ. ಒಡೆಯರಾಜ್—ಈ ಪೌರರ ಹಕ್ಕು ಬಾಧ್ಯತೆಗಳ ಸಿಬ್ಬಂದಿ ಶಾಖೆ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಇದರ ಕೆಲಸವನ್ನು ಚುರುಕುಗೊಳಿಸುವು ದಕ್ಕಾಗಿ ತಾವು ತೀವ್ರವಾದಂಥ ಯಾವ ಕ್ರಮವನ್ನು ಕೈಕೊಳ್ಳುತ್ತೀರಾ? ಎರಡನೆಯದಾಗಿ, ಈ ಶಾಖೆಯು ಕೆಲಸಕಾರ್ಯಗಳಲ್ಲಿ ಸಮಾಜಿಕ ಸಮಸ್ಯೆಗಳು ಬರುವುದರಿಂದ ಸಮಾಜದವರೂ ಸಹ ಇದರ ಜೊತೆಗೆ ಸಹಕರಿಸಬೇಕೆಂದು ಮಾನ್ಯ ಮಂತ್ರಿಗಳು ಕೋರಿದರು. ಈ ದಿಶೆಯಲ್ಲಿ ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ ಮತ್ತು ಇದರ ಬಗ್ಗೆ ಸರ್ಕಾರದ ಧೋರಣೆ ಏನು ?

ಶ್ರೀ ಎಲ್. ಜಿ. ಹಾವನೂರ್—ಈ ಪೌರರ ಹಕ್ಕು ಬಾಧ್ಯತೆಗಳ ಸಿಬ್ಬಂದಿ ಶಾಖೆ ತೃಪ್ತಿಕರವಾಗಿ ಕೆಲಸ ಮಾಡಿಲ್ಲವೆಂದು ಮಾನ್ಯ ಸದಸ್ಯರು ಏನು ಅಪಾದನೆ ಮಾಡಿದರು, ಅದನ್ನು ನಾನು ಒಪ್ಪುವುದಿಲ್ಲ. ನಮ್ಮ ಅಧಿಕಾರಿಗಳು ದಕ್ಷರಿದ್ದಾರೆ. ಈ ಅಸ್ಪೃಶ್ಯತೆಯ ಅನಿಷ್ಟವನ್ನು ಸಮಾಜದಿಂದ ರತಕ್ಕಂಥ ವಿಶೇಷ ಪಾದಂಥ ನಿವಾರಣೆ ಮಾಡಬೇಕೆಂದು ತೀರ್ಮಾನಿಸಿಕೊಂಡು ಆ ಬಗ್ಗೆ ಕಳಕಳಿಯಿಂದ ಕೆಲಸ ಮಾಡುವ ಅಧಿಕಾರಿ ಗಳು ನಮ್ಮಲ್ಲಿದ್ದಾರೆಂಬುದನ್ನು ನಾನು ಹೆಮ್ಮೆಯಿಂದ ಹೇಳಬಯಸುತ್ತೇನೆ. ಈ ಮೊದಲು ರಿಮೂವಲ್ ಆಫ್ ಅನಟಚಬಿಲಿಟಿ ಆಕ್ಟ್ ಎಂದು ಇತ್ತು. ಈಗ ಅದು ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಆಕ್ಟ್ ಎಂದು ಆಗಿದೆ. ಇದಕ್ಕೆ ಸಂಬಂಧಪಟ್ಟಂತೆ ಕೆಲವು ಕಾರ್ಯಗಳನ್ನು ನಮ್ಮ ಅಧಿಕಾರಿಗಳು ನಿರ್ವಹಣೆ ಮಾಡುತ್ತಿದ್ದಾರೆ. ನಮ್ಮ ಸಾಮಾಜಿಕ ಕ್ಷೇತ್ರದಲ್ಲಿ ಪರಿಜನರ ಮೇಲೆ ನೂರಾರು ಸಾವಿರಾರು ಅತ್ಯಾಚಾರಗಳು, ಅನ್ಯಾಯಗಳು ದಬ್ಬಾಳಿಕೆಗಳು ನಡೆಯುತ್ತಿದ್ದವು. ಅದನ್ನೆಲ್ಲಾ ನಿವಾರಣೆ ಮಾಡುವುದಕ್ಕೆ ಈ ಒಂದು ಸಣ್ಣ ಶಾಖೆಯಿಂದ ಆಗುವುದಿಲ್ಲ. ಇದು ಒಂದು ಸಾಮಾಜಿಕ ಸಮಸ್ಯೆಯಾದ ಕಾರಣ, ಈ ಸಮಾಜದಲ್ಲಿರತಕ್ಕಂಥ ಸಮರ್ಣಿಯ ಜನರಲ್ಲಿ ಈ ಬಗ್ಗೆ ಮಾನಸಿಕ ಪರಿವರ್ತನೆ ಯಾವ ರೀತಿಯಾಗಬೇಕು ಎಂಬ ಬಗ್ಗೆ ನಾವಾದರೂ ಸಹ ಬೇಕಾದಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮುಖ್ಯವಾಗಿ ಈ ಅಸ್ಪೃಶ್ಯರಿಗೆ ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯನ್ನು ತಂದುಕೊಡುವುದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿ

ದ್ದೇವೆ. ಇವರುಗಳು ಮೇಲಿನ ವರ್ಗದವರ ಆರ್ಥಿಕ ಅವಲಂಬನೆಯಿಂದ ಜೀವನ ಮಾಡುವಾಗ ತಮ್ಮ ಒಂದು ಹಕ್ಕು ಗಳನ್ನು ಚಲಾಯಿಸುವುದಕ್ಕಾಗುವುದಿಲ್ಲ. ಅದಕ್ಕಾಗಿ ಇವರಿಗೆ ಆರ್ಥಿಕ ಸ್ವಾತಂತ್ರ್ಯ ತಂದು ಕೊಡಬೇಕೆಂದು ಜಮೀನು ಒದಗಿಸಿ ಕೊಡಲಾಗುತ್ತಿದೆ ಹೊಸಹೊಸ ಉದ್ಯಮಗಳನ್ನು ಸ್ಥಾಪನೆ ಮಾಡಲು ಯಾರಾದರು ಪ್ರಯತ್ನ ಮಾಡುತ್ತಿದ್ದರೆ ಅಂತಹವರಿಗೆ ಅವಕಾಶ ಮಾಡಿಕೊಡಲಾಗುತ್ತಿದೆ, ಸರ್ಕಾರಿ ನೌಕರಿಯಲ್ಲಿ ಮೀಸಲು ಸ್ಥಾನಗಳನ್ನು ಕಲ್ಪಿಸಿಕೊಡಲಾಗಿದೆ, ಮುನಿಸಿಪಾಲಿಟಿ, ಪಂಚಾಯಿತಿ ಮುಂತಾದ ಸ್ಥಳೀಯ ಸಂಸ್ಥೆಗಳಲ್ಲಿಯೂ ಸಹ ಇವರಿಗೆ ಮೀಸಲು ಸ್ಥಾನಗಳನ್ನು ಮಾಡಿಕೊಡಲಾಗಿದೆ. ಜೊತೆಗೆ ವಿಧಾನಸಭೆ ಮತ್ತು ಪಾರ್ಲಿಮೆಂಟಿನಲ್ಲಿಯೂ ಸಹ ಇವರಿಗೆ ಮೀಸಲು ಸ್ಥಾನಗಳನ್ನು ಕಲ್ಪಿಸಿಕೊಟ್ಟಿರುವುದರಿಂದ ಮತ್ತು ಸಂಘ ಸಂಸ್ಥೆಗಳಲ್ಲಿಯೂ ಸಹ ಇವರುಗಳು ಆರಿಸಿ ಬರಲು ಅವಕಾಶ ಮಾಡಿಕೊಟ್ಟಿರುವುದರಿಂದ, ಸಾಧ್ಯವಾದಮಟ್ಟಿಗೂ ಆಯಾಯ ಕ್ಷೇತ್ರಗಳಲ್ಲಿ ಈ ಅಸ್ಪೃಶ್ಯತೆಯ ನಿವಾರಣೆ ತಕ್ಕಮಟ್ಟಿಗೆ ಆಗಬಹುದೆಂದು ನಾವು ತಿಳಿದಿದ್ದೇವೆ. ಪ್ರಜಾಪ್ರಭುತ್ವದ ತತ್ವದ ಮೇಲೆ ಇವರು ಆರಿಸಿ ಬರುವುದರಿಂದ ಈ ಪ್ರಜಾಪ್ರತಿನಿಧಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಿ ಜನರ ಮನಸ್ಸನ್ನು ಪರಿವರ್ತನೆ ಮಾಡಲು.....

ಶ್ರೀ ಜೆ. ಎಚ್. ಪಟೇಲ್:—ಈ ರಾಪೆ ಕಾರ್ಯಾಚರಣೆಯಲ್ಲಿ ತೊಡಗಿದ್ದು ೧೯೭೪ ರಲ್ಲಿ ಆಗ ಕೇಂದ್ರದಲ್ಲಿದ್ದ ನಿಮ್ಮ ಕಾಂಗ್ರೆಸ್ ಸರ್ಕಾರ ಈ ಕೆಲಸಕ್ಕೆ ಎಷ್ಟು ಹಣ ಕೊಟ್ಟಿತು ಎಂಬುದನ್ನು ಹೇಳಿ ? ಕೇಂದ್ರದಲ್ಲಿ ನಿಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ೧೦ ಲಕ್ಷ ರೂ.ಗಳನ್ನು ಬಿಡುಗಡೆಮಾಡಿದೆ. ಇನಕ್ಕೆ ಮೊದಲು ನಿಮ್ಮ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ ಎಂಬುದನ್ನು ಮೊದಲು ಹೇಳಿ?

ಶ್ರೀ ಎಲ್. ಜಿ. ಹಾವನೂರ್.—ನಾನು ಹೇಳಿದ್ದು ಒಟ್ಟಿಗೆ ೧೦ ಲಕ್ಷ ರೂ.ಗಳನ್ನು ಕೊಟ್ಟಿಲ್ಲ. ೫೦ ಸಾವಿರ, ಒಂದು ಲಕ್ಷ ಹೀಗೆ ಒಟ್ಟು ಸೇರಿದರೆ ಮಾರ್ಚ್ ತಿಂಗಳವರೆಗೆ ೧೦ ಲಕ್ಷ ರೂ.ಗಳನ್ನು ಕೇಂದ್ರದವರು ಕೊಟ್ಟಿದ್ದಾರೆ ಎಂಬುದಾಗಿ, ಕೇಂದ್ರದಲ್ಲಿ ಜನತಾ ಸರ್ಕಾರಕ್ಕೆ ಬಂದಮೇಲೂ ಹಣ ಕೊಟ್ಟಿದ್ದಾರೆ. ಆದಕ್ಕೆ ಮೊದಲು ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರದವರು ಸಹ ಹಣ ಕೊಡುತ್ತಾ ಬಂದಿದ್ದರು. ಆದರೆ ಆದೆಲ್ಲಾ ಸೇರಿದರೆ ಇಪ್ಪತ್ತಿನ ತನಕ ೧೦ ಲಕ್ಷಕ್ಕೂ ಹೆಚ್ಚಾಗಿಲ್ಲ. ಹಿಂದಿನ ಸರಕಾರದವರು ಸಹ ಪೂರ್ಣವಾಗಿ ಹಣ ಕೊಡಲಿಲ್ಲ. ಸ್ವಲ್ಪ ಸ್ವಲ್ಪವಾಗಿ ಕೊಟ್ಟುಕೊಂಡು ಬಂದರು. ಇಡಿಯಾಗಿ ಕೊಡಲಿಲ್ಲ.

ಮಾನ್ಯ ಬೋರ್‌ಕರ್ ಅವರು ಸಿರಸಿ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದರು. ಸಿರಸಿಯಲ್ಲಿ ಆದಂಥ ಘಟನೆ ಬಗ್ಗೆ ನಮ್ಮ ಸೆಲ್‌ಗೆ ಅವರು ತಕರಾರು ಕಂಪ್ಲೆಂಟ್ ಕೊಟ್ಟಿದ್ದರೆ ಅದನ್ನು ತಪಾಸಣೆಮಾಡಿ ಯೋಗ್ಯ ಕ್ರಮ ತೆಗೆದುಕೊಳ್ಳುತ್ತಿದ್ದರು, ಹಾಗೇ ಬಿಟ್ಟಿಲ್ಲ ಎಂದು ನಾನು ಆಶ್ವಾಸನೆ ಕೊಡುತ್ತೇನೆ. ಆಕಸ್ಮಿಕವಾಗಿ ನಮ್ಮ ಸೆಲ್ ಕ್ರಮ ತೆಗೆದುಕೊಳ್ಳದೇ ಹೋಗಿದ್ದರೆ ನಿಮ್ಮಿಂದ ಕಂಪ್ಲೆಂಟ್ ಬಂದಿಲ್ಲ ಎಂದು ಹೇಳಬಯಸುತ್ತೇನೆ.

ಳ.ಹಿ೦ ಪಿ.ಎಂ.

ಶ್ರೀ ಯು. ಬಿ. ಬೋರ್‌ಕರ್— ಆಲ್ಲಿನ ಜನತೆಯಿಂದ ಕಂಪ್ಲೆಂಟ್ ಬಂದಿದೆ. ಮನೆಗಳನ್ನೆಲ್ಲಾ ಕಡವಿದ್ದಾರೆ, ಹರಿಜನರ ಮೇಲೆ ದಬ್ಬಾಳಿಕೆ ನಡೆದಿದೆ; ಅದನ್ನು ಕೇಳುವವರೇ ಇಲ್ಲ. ಈ ಘಟನೆ ಬಗ್ಗೆ ಡಿ.ಸಿ. ಯವರಿಗೆ ಮತ್ತು ತಹಶೀಲ್ದಾರ್ ಅವರಿಗೆ ಅರ್ಜಿ ಕೊಟ್ಟಿದೆ.

MR. SPEAKER– Question hour is exhausted. I have allowed more time because some members are new. If the hon–member is interested, he can send a notice for the half an hour discussion on the subject.

ಶ್ರೀ ಎಸ್. ಎಸ್. ಅರಕೇರಿ.—ಈ ಮನೆಯಲ್ಲಿ ಸಮಯದ ಪ್ರಶ್ನೆ. ಹರಿಜನರ ಪ್ರಶ್ನೆಬಂದಾಗ ಬರುತ್ತದೇನೋ. ಹರಿಜನರ ಪ್ರಶ್ನೆ ಬಂದಾಗ ವಿರೋಧ ಮಾಡುತ್ತಾರೆ.

Let we have a last question.

ಅಧ್ಯಕ್ಷರು.— ಅರ್ಧ ಗಂಟೆ ಚರ್ಚೆಗೆ ಸೂಚನೆ ಕಳುಹಿಸಿ.

SRI S. S. ARAKERI.—When the question is so vital, and when the Minister is ready to answer, can I not put a supplementary? When so much of attrocities on Harijans are going on. I want to know whether this Government will be able to give protection to the life and

property of Harijans. When such things are happening if I am not allowed to put a question, what can we do ? I have put only two questions so far and the Minister is very sympathetic to answer my question.

SRI. AZEEZ SAIT.—The Karnataka Government is more sympathetic than your Janatha Government.

SRI S. S. ARAKERI.—Then why are you preventing me from putting a question?

ಶ್ರೀ ಜೆ. ಹೆಚ್. ಪಟೇಲ್.— ದಯವಿಟ್ಟು ಮಂತ್ರಿಗಳನ್ನು ಕಂಟ್ರೋಲ್ ಮಾಡದೆ ಹೋದರೆ ಬಹಳ ಕಷ್ಟವಾಗುತ್ತದೆ. ತಾವು ಹೇಳಿದ ಹಾಗೆ ಸದಸ್ಯರು ಬೇಕಾದರೆ ಮಾತನಾಡಲಿ.

ಅಧ್ಯಕ್ಷರು:— ನೀವು ದಯವಿಟ್ಟು ಕುಳಿತುಕೊಳ್ಳಬೇಕು. ಅಸಭ್ಯವಾಗಿ ವರ್ತಿಸಬಾರದು.

ಶ್ರೀ ಎಸ್. ಎಸ್. ಅರಕೇರಿ:- ಮಾನ್ಯ ಮಂತ್ರಿಗಳು ಉತ್ತರದಲ್ಲಿ ೧೯೭೫ನೇ ಇಸವಿಯಿಂದ ೧೯೭೮ ರವರೆಗೆ ಎಷ್ಟೆಷ್ಟು ಕೇಸ್‌ಗಳ ಮೇಲೆ ಚಾರ್ಜ್‌ಷೀಟ್ ಹಾಡಿದ್ದಾರೆ ಎನ್ನುವುದರ ಬಗ್ಗೆ ಹೇಳಿದ್ದಾರೆ. ೧೯೭೫ನೇ ಇಸವಿಯಲ್ಲಿ ೪೬೯, ೧೯೭೬ನೇ ಇಸವಿಯಲ್ಲಿ ೫೯೨, ೧೯೭೭ನೇ ಇಸವಿಯಲ್ಲಿ ೩೬೯. ಇಷ್ಟು ಕೇಸುಗಳು ರಿಪೋರ್ಟ್ ಆದಾಗ ಅಯಾಯ ವರ್ಷಗಳಲ್ಲಿ ಚಾರ್ಜ್‌ಷೀಟ್ ಆದದ್ದು ೩೯೭, ೫೪೪ ಮತ್ತು ೨೪೩ ಎಂದು ಹೇಳಿದ್ದಾರೆ. ಮುಂದೆ Otherwise deposed of ಎಂದು ಹೇಳಿದ್ದಾರೆ. ಅದರಲ್ಲಿ ೧೯೭೫ನೇ ಇಸವಿಯಲ್ಲಿ ೭೨, ೧೯೭೬ ರಲ್ಲಿ ೪೩ ಮತ್ತು ೧೯೭೭ರಲ್ಲಿ ೨೬. ಇದನ್ನು ನಾವು ನೋಡಿದಾಗ, ೧೯೭೬ನೇ ಇಸವಿಯಲ್ಲಿ ಯಾವಾಗ ದೇಶದಲ್ಲಿ ತುರ್ತುಪರಿಸ್ಥಿತಿ ಇತ್ತು ಆ ವರ್ಷದಲ್ಲಿ ೫೯೨ ಕೇಸುಗಳು ರಿಪೋರ್ಟ್ ಆದಾಗ ೫೪೪ ಕೇಸುಗಳ ಮೇಲೆ ಚಾರ್ಜ್‌ಷೀಟ್ ಹಾಕಿದ್ದಿರಿ. ಅದರಲ್ಲಿ ೨೦೫ ಕನ್‌ವಿಕ್ಟ್ ಆಗಿವೆ, ೭೭ ಅಕ್ವಿಟ್ ಆಗಿವೆ; ೨೦೭ ಪೆಂಡಿಂಗ್ ಇವೆ. ಇದನ್ನು ನೋಡಿದಾಗ ಯಾವರೀತಿ ಸರ್ಕಾರದವರು ಕೇಸುಗಳನ್ನು ಇನ್‌ವೆಸ್ಟಿಗೇಷನ್ ಮಾಡಿದರು ಅದರ್‌ವೈಸ್ ಡಿಸ್ಪೋಸ್ ಅಂದಾಗ 'ಬಿ' ರಿಪೋರ್ಟ್ ಹಾಕಿದರೆ ಯಾವರೀತಿ ಡಿಸ್ಪೋಸ್ ಆಗಿದೆ. ಹರಿಜನರಿಗೆ ಸರಿಯಾದಂಥ ನ್ಯಾಯ ಒದಗಿಸಿಲ್ಲ ಎಂದು ಸ್ಪಷ್ಟವಾಗಿ ಕಾಣುತ್ತದೆ. ಆದಕ್ಕೆ ಮಾನ್ಯ ಸಚಿವರು ಪ್ರತಿಯೊಂದು ಜಿಲ್ಲೆಯಲ್ಲಿ ಸ್ಪೆಷಲ್ ಪೋಲೀಸ್ ಫೋರ್ಸನ್ನು ಕ್ರಿಯೇಟ್ ಮಾಡಿ, ಇನರ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ನಾನು ಸಲಹೆ ಕೊಡುತ್ತೇನೆ. ಇದನ್ನು ಮಾಡುವುದು ಸರ್ಕಾರದ ಜವಾಬ್ದಾರಿ. ಇದಕ್ಕೆ ಮಂತ್ರಿಗಳು ಏನು ಹೇಳುತ್ತಾರೆ.

ಅಧ್ಯಕ್ಷರು.— ಉಪ ಪ್ರಶ್ನೆಯಲ್ಲಿ ಸಲಹೆ ಕೊಡುವುದಕ್ಕೆ ಬರುವುದಿಲ್ಲ. Question hour is over.

ಶ್ರೀ ಎಸ್.ಆರ್. ಬೊಮ್ಮಾಯಿ.— ಪ್ರಶ್ನೋತ್ತರವೇಳೆ ಒಂದು ಗಂಟೆ ಎಂದು ಲಿಮಿಟ್ ಇದೆ. ಈಗ ಆದಕ್ಕಿಂತ ಹೆಚ್ಚಾಗಿದೆ. ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡಿರಿ.

ಅಧ್ಯಕ್ಷರು.— ಮಾನ್ಯ ಅರಕೇರಿಯವರು ಪ್ರಶ್ನೆಯನ್ನು ಕೇಳಲಿಲ್ಲ, ನಾನು ಸಲಹೆ ಕೊಡುತ್ತಿದ್ದೇನೆ, ಅದಕ್ಕೆ ಮಂತ್ರಿಗಳ ಏನು ಹೇಳುತ್ತಾರೆ ಎಂದು ಕೇಳಿದರು.

I am carefully watching.

SRI BHEEMANNA KHANDRE.— It is an humble suggestion I am making. Hundreds of questions come up. I want to put only one question and you are not allowing me.

ಅಧ್ಯಕ್ಷರು :- ತಾವು ಐದೆ ಕೂಡ ವಿಧಾನಸಭೆಯ ಸದಸ್ಯರಾಗಿದ್ದೀರಿ, ತಮಗೆ ಗೊತ್ತಾಗುವುದಿಲ್ಲವೇ ? ಈ ಪಾರಭ್ಯಾಸ ಬಿಟ್ಟರೆ ಸರಿಹೋಗುತ್ತದೆ. ಒಂದು ಪ್ರಶ್ನೆಗೆ ಎಷ್ಟು ಉಪಪ್ರಶ್ನೆಗಳನ್ನು ಹಾಕಬಹುದು ಎಂದು ಗೊತ್ತಿಲ್ಲವೇ. ಏನೋ ಹೊಸ ಸದಸ್ಯರು ಎಂದುನಿಂತುಕೊಂಡು ಪ್ರಶ್ನೆ ಕೇಳಿದರೆ, ಅವರಿಗೆ ಕಾತುರತೆ ಇದೆ, ಅನುಮತಿ ಕೊಡೋಣ.

SRI BHEEMANNA KHANDRE :- It is also the opinion of the House. Please allow me.

ಅಧ್ಯಕ್ಷರು.—ಮಾನ್ಯ ಸದಸ್ಯರು ಉಪಪ್ರಶ್ನೆಯನ್ನು ನಿರ್ದಿಷ್ಟವಾಗಿ ಕೇಳಿದರೆ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಲ್.ಜಿ. ಹಾವನೂರ್.—ಮಾನ್ಯ ಭೀಮಣ್ಣ ಖಂಡ್ರೆಯವರು ಮತ್ತು ಶ್ರೀ ಆರಕೇರಿಯವರು ಹೇಳಿದ ವಿಷಯದ ಬಗ್ಗೆ ಉತ್ತರ ಕೊಡುವುದಾದರೆ, ಸಮಾನತೆಯ ತತ್ವ ಮತ್ತು ಸಾಮಾಜಿಕ ಕ್ರಾಂತಿಯ ಬಗ್ಗೆ ಕರ್ನಾಟಕದಲ್ಲಿ ಮಹಾ ಜ್ಯೋತಿ ಬಸವಣ್ಣನವರು ಮೊಟ್ಟಮೊದಲನೆಯದಾಗಿ ಒಂದು ಆಂಧೋಳನವನ್ನು ಶುರು ಮಾಡಿದರು. ಆ ತತ್ವವನ್ನು ನಾವು ಒಪ್ಪಿಕೊಂಡಿದ್ದೇವೆ, ಆದನ್ನು ಇಡೀ ಭಾರತ ದೇಶದ ಇತರ ಭಾಗಗಳವರೂ ಒಪ್ಪಿಕೊಂಡು ಅದರ ಪ್ರಚಾರದ ಕಾರ್ಯ ನಡೆಯಬೇಕಾಗಿದೆ. ಅಸ್ಪೃಶ್ಯತೆ ಸಮಸ್ಯೆ ಕರ್ನಾಟಕದಲ್ಲಿ ಹೋಗಿದೆಯೋ ವಿನಹ: ಇದು ಭಾರತದ ಇತರ ಭಾಗಗಳಲ್ಲಿಯೂ ನಿವಾರಣೆಯಾಗಬೇಕಾಗಿದೆ. ಅದನ್ನು ಎಲ್ಲಾ ಕಡೆಯು ನಿವಾರಣೆ ಮಾಡದೇ ನಾವು ಒಂದೇ ಕಡೆ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುತ್ತೇವೆಂದರೆ ಅದು ಬಹುಶ: ಸಾಧ್ಯವಾಗದ ಮಾತಾಗುತ್ತದೆ. ಆದಕ್ಕಾಗಿ ಪ್ರತಿಯೊಬ್ಬರೂ ಶ್ರಮಿಸಬೇಕಾಗಿದೆ. ಅಲ್ಲಿಯವರೆಗೂ ಅದುಹೋಗುವುದಿಲ್ಲ. ಇನ್ನು ೧೯೭೫-೭೬-೭೭ರ ಅಂಕಿ ಸಂಖ್ಯೆಗಳ ಬಗ್ಗೆ ಶ್ರೀ ಆರಕೇರಿಯವರು ಕೇಳಿದ್ದಾರೆ. ಈಗ ಡಿವಿಜಲ್ ಲೆವಲ್‌ನಲ್ಲಿ ಒಂದೊಂದು ಶೆಲ್ ಮಾಡಬೇಕೆಂದು ಮಾಡಿದ್ದೇವೆ. ಆ ಶೆಲ್‌ಗಳು ಯಾವರೀತಿ ಕಾರ್ಯ ಮಾಡಬಹುದು ಮತ್ತು ಎಷ್ಟು ದಕ್ಷತೆಯಿಂದ ಕಾರ್ಯ ನಿರ್ವಹಿಸುವುದು, ನಾವು ಅವರಿಗೆ ಒದಗಿಸಿರತಕ್ಕಂಥ ಸಿಬ್ಬಂದಿ ಸಾಕಷ್ಟು ಇದೆಯೋ ಇಲ್ಲವೋ ಎಂಬುದನ್ನು ನೋಡಿಕೊಂಡು ಕೆಂದ್ರ ಸರ್ಕಾರದವರು ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಲಿ ಒದಗಿಸದೇ ಇರಲಿ ನಮ್ಮ ಸರ್ಕಾರದವರು ಎಷ್ಟೇ ಕೋಟಿ ರೂಪಾಯಿಗಳು ಖರ್ಚಾದರೂ ನಮ್ಮದೇ ಆದಂಥ ಒಂದು ಶೆಲ್ ಜಿಲ್ಲಾ ಮಟ್ಟದಲ್ಲಿ ಇಡಬೇಕೆನ್ನುವ ಅಭಿಪ್ರಾಯವನ್ನಿಟ್ಟು ಕೊಂಡಿದ್ದೇವೆ. ಡಿವಿಜನಲ್ ಲೆವಲ್‌ನಲ್ಲಿ ಯಾವ ರೀತಿಯಾಗಿ ಕೆಲಸ ಮಾಡುತ್ತಿದೆ ಎಂಬುದಾಗಿ ನೋಡಿದ ನಂತರ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಎನ್ನುವ ಆಶ್ವಾಸನೆಯನ್ನು ಸರ್ಕಾರದ ಪರವಿಯಿಂದ ಕೊಡುತ್ತೇನೆ. ಇನ್ನು ಅಂಕಿ ಅಂಶಗಳ ಬಗ್ಗೆ ಹೇಳಬೇಕು ಎಂದರೆ ತುರ್ತು ಪರಿಸ್ಥಿತಿ ಕಾಲದಲ್ಲಿ ಅತ್ಯಾಚಾರಗಳು ಹೆಚ್ಚಾಗಿವೆ ಎಂದು ತೋರುತ್ತದೆಂದು ಹೇಳಿದರು ಆದರೆ ನಿಜವಾಗಿಯು ಹೇಳುವುದಾದರೆ ತುರ್ತು ಪರಿಸ್ಥಿತಿ ಕಾಲದಲ್ಲಿ ಪರಿಜನರಿಗೆ ನಿಜವಾದ ಸ್ವಾತಂತ್ರ್ಯ, ಹಕ್ಕು ಚಲಾಯಿಸುವುದಕ್ಕೆ ಅವಕಾಶವನ್ನು ದೊರಕಿಸಿಕೊಟ್ಟಿದೆ. ಆ ಕಾಲದಲ್ಲಿ ತಪ್ಪಾಗಿದ ಅತ್ಯಾಚಾರ ಅನಾಚಾರಗಳನ್ನು ಧೈರ್ಯವಾಗಿ ಬಂದು ಅಧಿಕಾರಿಗಳ ಮುಂದೆ ಕೊಟ್ಟಿದ್ದರಿಂದ ಅವು ಬಯಲಿಗೆ ಹೆಚ್ಚಾಗಿ ಬರುವುದಕ್ಕೆ ಕಾರಣವಾಗಿದೆಯೇ ಹೊರತು ತುರ್ತು ಪರಿಸ್ಥಿತಿಯಲ್ಲಿ ಪರಿಜನರ ಮೇಲೆ ಅತ್ಯಾಚಾರವಾಗಿದೆ ಎನ್ನುವುದು ತಪ್ಪು.

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಸಭಾಪತಿಗಳೇ, ಮಾನ್ಯ ಮಂತ್ರಿಗಳವರು ಒಂದು ಹೇಳಿಕೆ ಕೊಟ್ಟರು ಅದು ಸಮಾಜದ ಸುಧಾರಣೆಗಾಗಿ ಬರೀ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಧ್ಯವಿಲ್ಲ ಅದಕ್ಕಾಗಿ ಒಂದು ಸೂಚನೆ ಕೊಡುತ್ತಿದ್ದೇನೆ ಮಹಾವೀರ ಬಸವೇಶ್ವರರು ೮ ನೂರು ವರ್ಷಗಳ ಮೊದಲೇ ಇದರ ಬಗ್ಗೆ ವಚನಗಳನ್ನು ಬರೆದಿದ್ದಾರೆ ಅದನ್ನು ಸ್ಕೂಲ್, ಕಾಲೇಜುಗಳಲ್ಲಿ ಕಡ್ಡಾಯವಾಗಿ ಪ್ರಚಾರ ಮಾಡುವುದಕ್ಕಾಗಿ ಸರ್ಕಾರದ ಮನಸ್ಸು ಇದೆಯೇ ಎಂದು ಕೇಳುತ್ತೇನೆ? ಅದಕ್ಕೆ ಸರ್ಕಾರದವರು ವಚನ ಶಾಸ್ತ್ರವನ್ನು ಶಾಲಾ ಕಾಲೇಜ್‌ಗಳಲ್ಲಿ ತಂದರೆ ಅಸ್ಪೃಶ್ಯತೆ ನಿವಾರಣೆ ಮಾಡಲು ಸಾಧ್ಯವಾಗುತ್ತದೆ. ಅದು ಬಹಳ ಪರಿಣಾಮಕಾರಿಯಾಗಿ ಇರುತ್ತದೆ. ಅದಕ್ಕೆ ಸರ್ಕಾರದವರು ವಚನ ಸಾಹಿತ್ಯಕ್ಕೆ ಮಾನ್ಯತೆ ಕೊಡುತ್ತಾರೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಎಲ್.ಜಿ. ಹಾವನೂರ್.—ಅಸ್ಪೃಶ್ಯತೆಯ ನಿವಾರಣೆಗೆ ಸಂಬಂಧಪಟ್ಟ ಹಾಗೆ ನಮ್ಮಲ್ಲಿ ಬೇಕಾದಷ್ಟು ಸಾಹಿತ್ಯ ಇದೆ. ಮತ್ತು ಸರ್ಕಾರದವರು ಇದರ ಬಗ್ಗೆ ಪ್ರೋತ್ಸಾಹ ಕೊಡಲಿ ಕೊಡದೇ ಇರಲೀ ಅನೇಕ ಶರಣರು ಸಾಮಾಜಿಕ ಸುಧಾರಣೆಯ ಬಗ್ಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ. ಅದಕ್ಕಾಗಿ ೮೦೦ ವರ್ಷಗಳಿಂದಲೂ ಮಹಾತ್ಮ ಬಸವಣ್ಣನವರ ಮುಂತಾದ ಶರಣರ ವಚನಗಳನ್ನು ಜನತೆ ಪ್ರಚಾರ ಮಾಡಿಕೊಂಡು ಹೊರಟ್ಟಿದ್ದಾರೆ. ಇದರಿಂದಾಗಿ ನಮ್ಮಲ್ಲಿ ಸಮಾನತೆಯ ತತ್ವ ಉಳಿದಿದೆ. ಇನ್ನು ವಿಶೇಷವಾಗಿ ಅಸ್ಪೃಶ್ಯತೆ ನಿವಾರಣೆ ಬಗೆ, ಶರಣರ ಸಾಹಿತ್ಯದ ಬಗ್ಗೆ ಪ್ರಚಾರ ಮಾಡಬೇಕಾಗಿದೆ ಎಂದರೆ ಸರ್ಕಾರದಿಂದ ಹಣ ಕೊಡಿಸಿ ಕೊಡಿ ಎಂದು ನೀವು ಕೇಳುವುದಾದರೆ ನಾನು ಇರುವವರೆಗೂ ಅದಕ್ಕಾಗಿ ಎಷ್ಟು ಹಣವನ್ನು ಕೇಳಿದರೂ ಒದಗಿಸಿಕೊಡುತ್ತೇನೆ.